ಸ್ವಜನಿಕರು ಸಮಗ್ರವಾಗಿ ಪ್ರತಿಭಟನೆ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ನಿಲುವು ಏನು ?

ಶ್ರೀ ಜೆ.ಹೆಚ್. ಪಟೇಲ್,—ಈ ಸಾರ್ವಜನಿಕರ ಸಂಶಯಗಳಿಗೆ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ರಾಷ್ಟ್ರಪತಿಯಲ್ಲೇ ಹೆಸರಾಂತ ತಜ್ಞರಾದ ಶ್ರೀ ಡಾಕ್ಟರ್ ರಾಜರಾಮಣ್ಣ ಮತ್ತು ಡಾಕ್ಟರ್ ಶ್ರೀನಿವಾಸನ್ ಅವರುಗಳನ್ನು ಕರೆಸಿ ಮತ್ತು ಅಲ್ಲಿ ಪ್ರಮುಖರು ಯಾರು ಇದ್ದರು ಈ ಬಗ್ಗೆ ಸಾರ್ವಜನಿಕವಾಗಿ ಸಂಶಯ ಹುಟ್ಟಿಸಿದವರು ಯಾರು ಇದ್ದರು ಅವರು ಎಲ್ಲರನ್ನೂ ಕರೆಸಿ ವಿಚಾರ ಮಾಡಿ ಈ ತರಹ ಇದೆ ಈ ಬಲಯದಲ್ಲಿ ಏನು ಸುಧಾರಣೆ ಆಗಿದೆ, ಸೇಫ್ಟಿ ಮೇಜರ್ಸ್ ಇದೆ ಎಂದು ಹೇಳಿದರು. ಆದರೂ ಕೂಡ ಕೆಲವರಿಗೆ ಸಮಾಧಾನ ಇಲ್ಲ. ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಅಣು ಸ್ಥಾವರ ನಮಗೆ ಅತ್ಯಂತ ಅವಶ್ಯಕ. ಆದರಲ್ಲೂ ದಕ್ಷಿಣದಲ್ಲಿ ಈ ಸ್ಥಾವರ ವನ್ನು ಕೊಡಬೇಕೆಂದು ಬಹಳ ಪ್ರಯತ್ನಪಟ್ಟು ತರಿಸಿಕೊಂಡಿರುವಂಥಾದ್ದು...and we have go to see that it is executed.

ಅಧ್ಯಕ್ಷರು.—ಶ್ರೀ ಕೆ.ಹೆಚ್. ಪಾಟೀಲರೇ, ನೀವು ಕೇಳಿ.

ಶ್ರೀ ಕೆ.ಹೆಚ್. ಪಾಟೀಲ್.—ನನಗೆ ಸಮಾಧಾನವಾಗಿದೆ.

ಅಧ್ಯಕ್ಷರು,—ಶ್ರೀ ಮಲ್ಲಾರಿಗೌಡರ ಪ್ರಶ್ನೆ ಜೊತೆಗೆ ಶ್ರೀ ಕೆ.ಹೆಚ್. ಪಾಟೀಲರು ಕೇಳಿದ ಪ್ರಶ್ನೆಗೆ ಸಹ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆಂದೇ ಭಾವಿಸಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಅಧ್ಯಕ್ಷರೆ, ಇನ್ನು ಒಂದು ಪ್ರಶ್ನೆ ಇದೆ. ಸಾರ್ವಜನಿಕರ ಮನಸ್ಸನ್ನು ಒಲಿಸಲಿಕ್ಕೆ ಸರ್ಕಾರ ಏನು ಪ್ರಯತ್ನ ಮಾಡಿದೆ ? ಅವರ ಮನಸ್ಸಿಗೆ ವಿರೋಧವಾಗಿ ಕಾರ್ಯಕ್ರಮಗಳು ನಡೆಯಬಾರದು. ಇನ್ನು ಎಷ್ಟು ವರ್ಷದಲ್ಲಿ ಈ ಕಾರ್ಯಕ್ರಮ ಪ್ರಾರಂಭ ವಾಗುತ್ತದೆ ?

ಶ್ರೀ ಜೆ.ಹೆಚ್. ಪಟೇಲ್.—ಕೆಲಸ ಪ್ರಾರಂಭವಾಗಿದೆ. ಸುಮಾರು ಎರಡು ಸಾವಿರದ ಐನೂರು ಹೆಕ್ಟೇರ್ ಜಮೀನನ್ನು ಕೊಟ್ಟಿದ್ದೇವೆ. ಆ ಭಾಗದಲ್ಲಿ ಒಂದೇ ಒಂದು ಗ್ರಾಮ ಇದೆ. ಅದನ್ನು ಶಿಫ್ಟ್ ಮಾಡಿದ್ದೇವೆ. ಕಾಳಿನದಿ ಎರಡನೇ ಪ್ರಾಜೆಕ್ಟ್‌ನಲ್ಲಿ ಕದ್ರಾ ಡ್ಯಾಮ್ ಇದೆ. ಅಲ್ಲಿ ರಿಸರ್ವಾರ್ ಕಟ್ಟುತ್ತಿರುವುದರಿಂದ ಕೂಲಿಂಗ್ ಟವರ್ ಅವಶ್ಯಕತೆ ಇಲ್ಲ. ಯಾವುದೇ ಆಕ್ಸಿಡೆಂಟ್‌ಗೆ ಅವಕಾಶ ಇಲ್ಲದೆ ರೀತಿಯಲ್ಲಿ ಕೆಲಸ ಪ್ರಾರಂಭಮಾಡಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಮುಗ್ದ ಸ್ವಭಾವದ ಜನರಲ್ಲಿ ಇನ್ನೂ ಭೀತಿ ಇದೆ. ಅದನ್ನು ನಿವಾರಣೆ ಮಾಡುವುದಕ್ಕೆ, ಪ್ರಚಾರಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು ಅವರನ್ನು ಕನ್ವಿನ್ಸ್ ಮಾಡುತ್ತೀರಾ ?

ಶ್ರೀ ಜೆ.ಹೆಚ್. ಪಟೇಲ್.—ಮುಗ್ದ ಜನರ ತಕರಾರು ಇಲ್ಲ. ಬೇರೆಯವರು, ಯಾರಿಗೆ ಈ ವಿಷಯ ಗೊತ್ತಿದೆ, ಅವರೇ ತಕರಾರು ಮಾಡುತ್ತಿರುವುದು. ಈ ಬಿದತಕ್ಕಂಥವರು ವಿದ್ಯಾವಂತರು ಇವರನ್ನು ಬೆಂಗಳೂರಿಗೆ ಕರೆಸಿ ಶ್ರೀ ರಾಜರಾಮಣ್ಣ, ಶ್ರೀನಿವಾಸರಂಥ ಹೆಸರಾಂತ ತಜ್ಞರು ಸಾಕಷ್ಟು ಸಮಜಾಯಿಸಿ ಕೊಟ್ಟಿದ್ದಾರೆ.

ತಳಿ ಅಭಿವೃದ್ಧಿ ಕೇಂದ್ರಗಳು

೧೭೮ (೪೬೫ ಡಿ) ಶ್ರೀ ಚಂದ್ರಕಾಂತ ಜಿ. ಬೆಲ್ಲದ್ (ಧಾರವಾಡ).—ಮಾನ್ಯ ರೇಷ್ಮೆ ವ್ಯವಸಾಯ ಪಶು ಸಂಗೋಪನೆ ಹಾಗೂ ಮತ್ಸ್ಯೋದಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಪಶುಸಂಗೋಪನಾ ಯೋಜನೆಯಡಿಯಲ್ಲಿರುವ ತಳಿ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ ತಳಿಗಳ ವಿವರಣೆ ಕೊಡುವುದು ?

ಇ) ಹೈನು ತಳಿಗಳನ್ನು ಯಾವ ಯಾವ ಕೇಂದ್ರಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಸಚಿವರು).—

ಅ) ೨೦

ಆ) ದನಗಳ ತಳಿ : ೧. ಹೆಚ್ ಎಫ್ ೨ ಜರ್ಸಿ ಮತ್ತು ಅವುಗಳ ಮಿಶ್ರ ತಳಿಗಳು.
ದೇಶಿ ತಳಿಗಳು : ೧. ಅಮೃತ್ ಮಹಲ್ ೨. ಹಳ್ಳಿಕಾರ್ ೩. ಕೃಷ್ಣಾವ್ಯಾಲಿ ೪. ದೇವಣಿ ಮತ್ತು ೫, ಕಿಲಾರ.

ಎಮ್ಮೆ ತಳಿಗಳು : ಸೂರ್ತಿ ಮತ್ತು ಮುರ್ರ.

ಕುರಿ ತಳಿಗಳು : ವಿದೇಶಿ ತಳಿಗಳು : ೧) ರ್ಯಾಮಾಬುಲೆಟ್ ೨) ಮೆರಿನೊ ೩) ಕಾರಿಡೇಲ್ ಮತ್ತು ಇವುಗಳ ಮಿಶ್ರ ತಳಿಗಳು.
ದೇಶಿ ತಳಿಗಳು : ೧) ಬಂಡೂರು ೨) ಡೆಕ್ಕನಿ.

ಮೇಕೆ ತಳಿಗಳು : ಅಂಗೋರ.

ಹಂದಿ ತಳಿಗಳು : ವಿದೇಶಿ ತಳಿಗಳು : ಲ್ಯಾಂಡ್ ರೇಸ್ ಹ್ಯಾಮ್‌ಷಯರ್ ಮತ್ತು ಯಾರ್ಕ್‌ಷಯರ್.
ದೇಶಿ ತಳಿಗಳು : ಐಬಿಬಿ–೮೩, ಮೈಚಿಕ್.

ಮೊಲದ ತಳಿಗಳು : ವಿದೇಶಿ: ೧) ನೂಜಿಲೆಂಡ್ ವೈಟ್ ಮತ್ತು ಗ್ರೇ ಜಯಂಟ್.

ಇ) ಹೈನು ತಳಿಗಳನ್ನು ಈ ಕೆಳಗೆ ನಮೂದಿಸಿರುವ ಎಲ್ಲಾ ಕೇಂದ್ರಗಳಲ್ಲೂ ಅಭಿವೃದ್ಧಿಪಡಿಸಲಾಗುತ್ತದೆ.

೧. ಹೆಸರಘಟ್ಟ (ಬೆಂಗಳೂರು ಜಿಲ್ಲೆ),
೨. ಮುನಿರಾಬಾದ್ (ರಾಯಚೂರು ಜಿಲ್ಲೆ),
೩. ಕೂಡಿಗೆ (ಕೊಡಗು ಜಿಲ್ಲೆ),
೪. ಧಾರವಾಡ.
೫. ಕ್ಯೊಲ್ (ದಕ್ಷಿಣ ಕನ್ನಡ ಜಿಲ್ಲೆ),
೬. ತೇಗೂರು (ಧಾರವಾಡ ಜಿಲ್ಲೆ),
೭, ಬಂಕಾಪುರ (ಧಾರವಾಡ ಜಿಲ್ಲೆ),
೮. ಉಳವರ್ತಿ (ಚಿತ್ರದುರ್ಗ ಜಿಲ್ಲೆ).

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಈ ಪಶು ಸಂಗೋಪನೆ, ಹಾಲು ಉತ್ಪಾದನೆಗೆ ಬಹಳಷ್ಟು ಅವಕಾಶ ಇದೆ. ಈಗಾಗಲೇ ರಾಷ್ಟ್ರೀಯ ಬ್ಯಾಂಕ್‌ಗಳು ಮತ್ತಿತರ ಅನೇಕ ಬ್ಯಾಂಕ್‌ಗಳು ಹಣದ ಸಹಾಯವನ್ನು ನೀಡುತ್ತಿದ್ದಾರೆ. ಇವತ್ತು ಒಳ್ಳೆಯ ಹೈನು ತಳಿಗಳು ಸಿಕ್ಕುತ್ತಿಲ್ಲ. ಅವರು ಗೈರು ಖರೀದಿ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿದೆಯೇ ? ಬ್ಯಾಂಕ್‌ಗಳ ಹಣ ಸದುಪಯೋಗವಾಗುವುದಿಲ್ಲ. ಇದರ ಬದಲು ಬೆಳೆ ಉತ್ಪಾದನೆ ಮಾಡುವಂಥ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದ್ದೀರಾ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಮಾನ್ಯ ಅಧ್ಯಕ್ಷರೇ, ಹೈನು ತಳಿಗಳ ಕೇಂದ್ರಗಳನ್ನು ತಿಳಿಸಿದ್ದೇನೆ, ಕೇಂದ್ರಗಳಲ್ಲಿ ವಿದೇಶಿ ತಳಿಗಳ ವೀರ್ಯವನ್ನು ಪಡೆದು, ನಮ್ಮ ಕರ್ನಾಟಕದಲ್ಲಿರತಕ್ಕಂಥ ಸ್ಥಳೀಯ ತಳಿಗಳ ಮೇಲೆ ಪ್ರಯೋಗಿಸಿ, ಹೊಸ ಮಿಶ್ರ ತಳಿಗಳನ್ನು ಮಾಡುತ್ತಿದ್ದಾರೆ, ಕರ್ನಾಟಕದ ಹಾಲು ಉತ್ಪಾದನೆ ಜಾಸ್ತಿ ಇದೆ. ಈಗಾಗಲೇ ವಿದೇಶಿ ತಳಿಗಳು ಇದ್ದರೂ, ಜರ್ಮನಿಯಿಂದ ಮಾರ್ಜಿಯಲ್ಲಿ ೩೮೦ ತಳಿಗಳನ್ನು ಪಡೆದು, ರೈತರಿಗೆ ಕೊಡುತ್ತಿದ್ದೇವೆ. ಈ ಎಲ್ಲಾ ಕೇಂದ್ರಗಳಲ್ಲಿ ವಿದೇಶಿ ಕೇಂದ್ರಗಳ ವೀರ್ಯವನ್ನು ಪಡೆದು, ಅದನ್ನು ಫ್ರೀಜ್‌ಕರಿಸಿ, ಕೇಂದ್ರೀಕರಿಸಿ, ವ್ಯಾಪಕವಾಗಿ ಎಲ್ಲಾ ಕಡೆಗೂ ಕೊಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ನಿಗಾ ಕೊಡುತ್ತಿದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಅನೇಕ ಕೇಂದ್ರಗಳನ್ನು ಮಾಡಿದಾಗ್ಯೂ ಸಹಿತ ಸರಿಯಾದ ದೃಷ್ಟಿಯಲ್ಲಿ ಉತ್ಪಾದನೆ, ಮತ್ತು ಸರಿಯಾದ ಲಾಭ ಕಂಡುಬರುತ್ತಿಲ್ಲ. ಇದರ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುತ್ತಿದೆಯೇ ?

ಶ್ರೀ ಕೆ, ಎಂ. ಕೃಷ್ಣಾರೆಡ್ಡಿ.—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಉಕ್ಕಿನ ದರ ಕರಾರು ನಿಗದಿಯ ಬಗ್ಗೆ

೧೭೯ (೪೮೪) ಶ್ರೀ ಕೆ.ಜೆ. ಜಾರ್ಜ್ (ಭಾರತೀನಗರ).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಸರಕು ಖರೀದಿ ಇಲಾಖೆಯಲ್ಲಿ ಉಕ್ಕಿಗೆ ನಿಗದಿಪಡಿಸಿರುವ ದರ ಕರಾರು ಎಷ್ಟು ?

ಆ) ಸರಬರಾಜುದಾರನ ಹೆಸರು ಮತ್ತು ಅವರು ತಯಾರಕರೇ ?

ಇ) ಮಾರುಕಟ್ಟೆಯ ದರ ಕಡಿಮೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಈ) ಸರ್ಕಾರ ಖರೀದಿಸಿರುವ ಉಕ್ಕಿನ ಮೊತ್ತವೇನು ?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಸರಕು ಖರೀದಿ ಇಲಾಖೆಯು ಉಕ್ಕಿಗೆ ದರ ಕರಾರನ್ನು ನಿಗಧಿಪಡಿಸುವುದಿಲ್ಲ. ಕೇಂದ್ರ ಸರ್ಕಾರದ ಜಾಯಿಂಟ್ ಪ್ಲಾಂಟ್ ಸಮಿತಿಯು ಉಕ್ಕಿನ ವಾರಾಟದ ಬೆಲೆಯನ್ನು ನಿರ್ಧರಿಸುತ್ತದೆ.

ಆ) ಇ) ಈ) ಉದ್ಭವಿಸುವುದಿಲ್ಲ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ನಮ್ಮ ರಾಜ್ಯಸರ್ಕಾರದವರು ಕೋಟ್ಯಾಂತರ ರೂಪಾಯಿ ಗಳ ಉಕ್ಕನ್ನು ಒಂದು ವರ್ಷಕ್ಕೆ ಕೊಂಡುಕೊಳ್ಳುತ್ತಿದ್ದಾರೆ. ಇಲ್ಲಿ ಅವರ ಉತ್ತರದಲ್ಲಿ ''ಕೇಂದ್ರ ಸರ್ಕಾರದ ಜಾಯಿಂಟ್ ಪ್ಲಾಂಟ್ ಸಮಿತಿಯು ಉಕ್ಕಿನ ವಾರಾಟದ ಬೆಲೆಯನ್ನು ನಿರ್ಧರಿಸುತ್ತದೆ'' ಎಂದು ಹೇಳಿದ್ದಾರೆ. ಈ ರಾಜ್ಯಕ್ಕೆ ಒದಗಿಸುವ ಉಕ್ಕಿಗೆ ಮತ್ತು ಅದರ ರೇಟ್ ವಾರ್ಕೆಟ್ ರೇಟಿಗಿಂತ ಜಾಸ್ತಿ ಇದೆಯೇ ?

ಶ್ರೀ ಜೆ.ಹೆಚ್. ಪಟೇಲ್.—ಅಧ್ಯಕ್ಷರೇ, ಸ್ಟೀಲ್ ರೇಟನ್ನು ಸ್ಟೋರ್ಸ್ ಪರ್ಚೇಸ್ ಡಿಪಾರ್ಟ್‌ಮೆಂಟ್‌ನವರು ನಿಗದಿ ಮಾಡುವುದಿಲ್ಲ. ನಮಗೆ ಯಾವ ಯಾವ ಡಿಪಾರ್ಟ್‌ಮೆಂಟ್‌ಗೆ ಎಷ್ಟು ವಸ್ತು ಗಳು ಬೇಕು, ಯಾವ ಸ್ಟಾಂಡರ್ಡ್ ವಸ್ತುಗಳು ಬೇಕು ಎಂಬುದನ್ನೆಲ್ಲಾ ಕೇಳುತ್ತಾರೆ. ಅನಂತರ ಟೆಂಡರ್ ಕರೆದ ಮೇಲೆ ಕ್ವಾಲಿಟಿ, ಸಪ್ಲೈ ಪೊಸಿಷನ್ ಎಲ್ಲಾ ನೋಡಿಕೊಂಡು ಟೆಂಡರುದಾರರಿಗೆ ವಹಿಸಿ ಕೊಡುತ್ತಾರೆ.

ಶ್ರೀ ಕೆ.ಜೆ. ಜಾರ್ಜ್.—ಅಧ್ಯಕ್ಷರೇ, ನಾನು ಕೇಳಿದ್ದು, ಸ್ಟೀಲ್ ರೇಟ್ ಅಲ್ಲ, ಸ್ಟೀಲ್‌ನಿಂದ ಉತ್ಪಾದನೆಯಾಗುವ ಉತ್ಪನ್ನಗಳ ರೇಟ್. ಅದನ್ನು ಯಾರು ಸಪ್ಲೈ ಮಾಡುತ್ತಾರೆ ? ಮಾರ್ಕೆಟ್ ರೇಟ್‌ಗಿಂತ ಜಾಸ್ತಿ ದರದಲ್ಲಿ ಸರ್ಕಾರದವರು ಇದನ್ನು ಪರ್ಚೇಸ್ ಮಾಡುತ್ತಿದ್ದಾರೆ ಎಂದು ಕೇಳಿದ್ದೇನೆ. ಸ್ಟೀಲ್ ರೇಟ್ ಕೇಳಿದ್ದಾರೆ ಎಂದು ಅವರು ಟೆಕ್ನಿಕಲ್ ಆಗಿ ಆನ್ಸರ್ ಮಾಡಬಹುದು. ನಾನು ಕೇಳಿದ್ದು ಸ್ಟೀಲ್‌ನಿಂದ ತಯಾರಾಗತಕ್ಕ ಉತ್ಪನ್ನಗಳ ಬಗ್ಗೆ ಅದಕ್ಕೆ ಉತ್ತರ ಹೇಳಬೇಕು.

ಶ್ರೀ ಜೆ.ಹೆಚ್. ಪಟೇಲ್.—ಟೆಕ್ನಿಕಲ್ ಆಗಿ ಸಮಾಧಾನಪಡಿಸುವುದಕ್ಕೆ ನಾನು ಹೋಗುತ್ತಿಲ್ಲ. ಮಾನ್ಯ ಸದಸ್ಯರು ಯಾವುದಾದರೂ ಇಲಾಖೆಯ ಖರೀದಿ ಬಗ್ಗೆ ಕೇಳಿದರೆ ಹೇಳಬಹುದು, ಎಲ್ಲಾ ಇಲಾಖೆಗಳೂ ಎಸ್.ಪಿ.ಡಿ. ಮೂಲಕವೇ ಖರೀದಿ ಮಾಡುವುದು, ಇರಿಗೇಷನ್, ಪಿ.ಹೆಚ್.ಇ., ಇಂಡಸ್ಟ್ರೀಸ್, ಅಗ್ರಿಕಲ್ಚರಲ್ ಯಾವುದೇ ಡಿಪಾರ್ಟ್‌ಮೆಂಟ್‌ನವರಾಗಲೀ ತಮಗೆ ಬೇಕಾದ ವಸ್ತು ಗಳನ್ನು ಅವರಿಂದ ತರಿಸಿಕೊಳ್ಳುತ್ತಾರೆ ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಿದರೆ, ವಿವರಗಳನ್ನು ತರಿಸಿ ಉತ್ತರ ಕೊಡುತ್ತೇನೆ. If he bring particulars about any department, I am prepared to answer.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೮೧ (೪೯೦)

ಶ್ರೀ ಡಿ.ಎ. ಚಿನ್ನಪ್ಪ (ವಂಡಿಕೇರಿ).—ಮುಂದೂಡಲಾಗಿದೆ